# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ಸಂಖ್ಯೆ:ತುವಿ:ಶೈವಿ:2025-26: 1838 ದಿನಾಂಕ:11.09.2025

## ಕೌನ್ಸಿಲಿಂಗ್‌ಗೆ ಬರುವ ವಿದ್ಯಾರ್ಥಿಗಳಿಗೆ ಸೂಚನೆ

1. ದಿನಾಂಕ:12.09.2025ರಂದು 10.00ಗಂಟೆಗೆ ನಡೆಯಲಿರುವ ಕೌನ್ಸಿಲಿಂಗ್‌ಗೆ ಹಾಜರಾಗುವ ವಿದ್ಯಾರ್ಥಿಗಳು ಯುಯುಸಿಎಂಎಸ್/ ಆಫ್‌ಲೈನ್‌ನಲ್ಲಿ ಸಲ್ಲಿಸಿರುವ ಅರ್ಜಿಯ ಒಂದು Hard Copy ಯನ್ನು ತರತಕ್ಕದ್ದು.
2. ಕೌನ್ಸಿಲಿಂಗ್ ನಡೆಯುವ ಸ್ಥಳದ ವಿವರ ಕೆಳಗಿನಂತಿದೆ.

| | |
|---|---|
| ಕಲಾ ವಿಷಯಗಳು ಹಾಗೂ ಎಂ.ಎಸ್ಸಿ. ಗ್ರಂಥಾಲಯ & ಮಾಹಿತಿ ವಿಜ್ಞಾನ ವಿಭಾಗ | ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಸಭಾಂಗಣ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಆವರಣ, ಸಿಟಿ ಕ್ಯಾಂಪಸ್, ತುಮಕೂರು. |
| ವಾಣಿಜ್ಯ ವಿಷಯಗಳು | ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಆವರಣ, ಸಿಟಿ ಕ್ಯಾಂಪಸ್, ತುಮಕೂರು. |
| ವಿಜ್ಞಾನ ವಿಷಯಗಳು | ಜ್ಞಾನಸಿರಿ ಕ್ಯಾಂಪಸ್, ಬಿದರಕಟ್ಟೆ. |
| ಎಂ.ಎಸ್.ಡಬ್ಲ್ಯೂ | ಪರೀಕ್ಷಾ ಭವನ, ಸಿಟಿ ಕ್ಯಾಂಪಸ್, ತುಮಕೂರು |

3. ಎಲ್ಲಾ ಮೂಲ ದಾಖಲಾತಿ, ಪಾಸ್ ಪೋರ್ಟ್ ಸೈಜ್ ಫೋಟೋ (5) ಹಾಗೂ ಎಲ್ಲಾ ದಾಖಲಾತಿಗಳ ಎರಡು ಸೆಟ್ ದೃಢೀಕೃತ ಜೆರಾಕ್ಸ್ ಪ್ರತಿ ತರತಕ್ಕದ್ದು.
4. ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಿರುವ Fee Structure ಮತ್ತು ಲಭ್ಯವಿರುವ ಸೀಟುಗಳನ್ನು ಪರಿಶೀಲಿಸಿ ಸಿದ್ಧರಾಗಿ ಬರತಕ್ಕದ್ದು.
5. **ಪ್ರವೇಶ ಪಡೆದ ನಂತರ ಪ್ರವೇಶ ಶುಲ್ಕವನ್ನು SB Collect ಮುಖಾಂತರ ಪಾವತಿಸಬೇಕಾಗಿರುವುದರಿಂದ ಆದಷ್ಟು ತಮ್ಮ ಬ್ಯಾಂಕ್ ಖಾತೆಯಿಂದಲೇ ಪಾವತಿಸಿ ಚಲನ್ ತರತಕ್ಕದ್ದು.**
6. ಪ್ರವೇಶಾತಿ ಶುಲ್ಕ ಹಾಗೂ ವಿಶ್ವವಿದ್ಯಾನಿಲಯವು ನಿಗದಿಪಡಿಸುವ ಇನ್ನಿತರೆ ಯಾವುದೇ ಶುಲ್ಕಗಳನ್ನು ಕಡ್ಡಾಯವಾಗಿ SB Collect ಮುಖಾಂತರವೇ ಪಾವತಿಸತಕ್ಕದ್ದು. ಯುಯುಸಿಎಂಎಸ್ ಆನ್‌ಲೈನ್ ಲಿಂಕ್ ಮೂಲಕ ಹಾಗೂ ಯಾವುದೇ ತರಹದ QR Code Scanner ಮೂಲಕ ಪಾವತಿಸಿದ್ದಲ್ಲಿ ಅಂತಹ ಶುಲ್ಕಗಳನ್ನು ಪರಿಗಣಿಸಲಾಗುವುದಿಲ್ಲ.
7. ಕೌನ್ಸಿಲಿಂಗ್ ನಂತರ ಪ್ರವೇಶಾತಿ ಪಡೆದ ವಿಭಾಗ/ ಕಾಲೇಜಿನಿಂದ Antiranging Form, TC Form ಹಾಗೂ ಇನ್ನಿತರೆ ನಮೂನೆಗಳನ್ನು ಭರ್ತಿ ಮಾಡಿ ಸಂಬಂಧಪಟ್ಟ ವಿಭಾಗಕ್ಕೆ ಸಲ್ಲಿಸತಕ್ಕದ್ದು.
8. ಪ್ರವೇಶಾತಿ ಹಾಗೂ ಇನ್ನಿತರೆ ಯಾವುದೇ ವಿಷಯಗಳ ಮಾಹಿತಿ ಅಗತ್ಯವಿದ್ದಲ್ಲಿ/ಸಂದೇಹಗಳಿದ್ದಲ್ಲಿ ಕೌನ್ಸಿಲಿಂಗ್ ದಿನದಂದೇ ಸಂಬಂಧಿಸಿದ ವಿಭಾಗದ ಮುಖ್ಯಸ್ಥರಲ್ಲಿ ಪಡೆಯತಕ್ಕದ್ದು/ಬಗೆಹರಿಸಿಕೊಳ್ಳತಕ್ಕದ್ದು.
9. ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಗಳ ಶೈಕ್ಷಣಿಕ ವೇಳಾಪಟ್ಟಿಯನ್ವಯ ದಿನಾಂಕ:15.09.2025ರಿಂದ ತರಗತಿಗಳು ಪ್ರಾರಂಭವಾಗುವುದರಿಂದ ವಿವಿಧ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಕಡ್ಡಾಯವಾಗಿ ತಾವು ಪ್ರವೇಶ ಪಡೆದ ಸ್ನಾತಕೋತ್ತರ ವಿಭಾಗ/ ಕಾಲೇಜುಗಳಿಗೆ ಭೇಟಿ ನೀಡಿ ತರಗತಿಗಳಿಗೆ ಹಾಜರಾಗುವಂತೆ ಸೂಚಿಸಿದೆ.

೧೧.೦೯.೨೦೨೫.
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು.

ಪ್ರತಿಗಳು:

1. ಅಧ್ಯಕ್ಷರು, ವಿವಿಧ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಸಮಿತಿ ಹಾಗೂ ಪ್ರಾಂಶುಪಾಲರು, ಘಟಕ/ಸಂಯೋಜಿತ ಕಾಲೇಜುಗಳು
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು– ಇಂದೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಛೇರಿ ಪ್ರತಿ.